ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 125-131
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕರ್ನಾಟಕ ರಾಜ್ಯದ ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯವೈಖರಿ: ಒಂದು ಅವಲೋಕನ

**ಸುಮ ವಿ**
ಸಂಶೋಧನಾ ವಿದ್ಯಾರ್ಥಿ, ರಾಜಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾಲಯ, ಮೈಸೂರು

***Abstract:***
*ಮಕ್ಕಳ ಹಕ್ಕುಗಳ ರಕ್ಷಣೆಯೂ ಹಾಗೂ ಅವರ ಸಮಗ್ರ ಅಭಿವೃದ್ಧಿಯೂ ಯಾವುದೇ ಸಮಾಜದ ಪ್ರಗತಿಯ ಪ್ರಮುಖ ಸೂಚಕವಾಗಿದೆ. ಕರ್ನಾಟಕ ರಾಜ್ಯದಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಕಾನೂನು ಮತ್ತು ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಮಕ್ಕಳ ಕಲ್ಯಾಣ ಸಮಿತಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಅಧ್ಯಯನವು ಕರ್ನಾಟಕ ರಾಜ್ಯದ ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯವೈಖರಿ, ಅದರ ಜವಾಬ್ದಾರಿಗಳು, ಕಾರ್ಯಕ್ಷೇತ್ರ, ಎದುರಿಸುತ್ತಿರುವ ಸವಾಲುಗಳು ಹಾಗೂ ಕಾರ್ಯಕ್ಷಮತೆಯ ಅವಲೋಕನವನ್ನು ಪರಿಶೀಲಿಸುತ್ತದೆ. ಮಕ್ಕಳ ರಕ್ಷಣೆ, ಪುನರ್ವಸತಿ, ಆರೈಕೆ ಹಾಗೂ ಕಾನೂನುಬದ್ಧ ಹಕ್ಕುಗಳ ಅನುಷ್ಠಾನದಲ್ಲಿ ಸಮಿತಿಯ ಪಾತ್ರದ ಮಹತ್ವವನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಜೊತೆಗೆ, ಸಮಿತಿಯ ಕಾರ್ಯಾಚರಣೆಯಲ್ಲಿ ಕಂಡುಬರುವ ಆಡಳಿತಾತ್ಮಕ, ಮಾನವ ಸಂಪನ್ಮೂಲ ಮತ್ತು ಮೂಲಸೌಕರ್ಯ ಸಂಬಂಧಿತ ಸಮಸ್ಯೆಗಳನ್ನೂ ಗುರುತಿಸಿ, ಪರಿಣಾಮಕಾರಿ ಮಕ್ಕಳ ಕಲ್ಯಾಣ ವ್ಯವಸ್ಥೆ ನಿರ್ಮಾಣಕ್ಕಾಗಿ ಕೆಲವು ಸಲಹೆಗಳನ್ನು ನೀಡಲಾಗಿದೆ.*

***Keywords:*** *ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ಹಕ್ಕುಗಳ ರಕ್ಷಣೆ, ಪುನರ್ವಸತಿ, ಮಕ್ಕಳ ಕಲ್ಯಾಣ ಯೋಜನೆಗಳು, ಕರ್ನಾಟಕ ರಾಜ್ಯ.*

## ಪೀಠಿಕೆ

ಭಾರತದಲ್ಲಿ ರಾಜ್ಯ ಸರ್ಕಾರಗಳಿಂದ ಬಾಲ ನ್ಯಾಯ ಕಾಯ್ದೆಯಡಿಯಲ್ಲಿ ಸ್ಥಾಪಿಸಲ್ಪಟ್ಟ ಮಹಿಳಾ ಕಲ್ಯಾಣ ಸಮಿತಿಯು ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು, ಅನಾಥರು, ಕಳೆದುಹೋದ ಅಥವಾ ದೌರ್ಜನ್ಯಕ್ಕೊಳಗಾದ ಮಕ್ಕಳ ಆರೈಕೆ, ರಕ್ಷಣೆ, ಚಿಕಿತ್ಸೆ ಮತ್ತು ಪುನರ್ವಸತಿ ಕಲ್ಪಿಸುವುದೇ ಇದರ ಕಾರ್ಯಕ್ರಮವಾಗಿದೆ. ಮಕ್ಕಳ ಹಿತಾಸಕ್ತಿಗಳನ್ನು ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು ಅರೆ-ನ್ಯಾಯಾಂಗ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ. ಜೊತೆಗೆ ಕಾನೂನಿನ ವ್ಯಾಪ್ತಿಯಲ್ಲಿ ಬರುವ ಮಕ್ಕಳ ಪ್ರಕರಣಗಳನ್ನು ನಿರ್ವಹಿಸುತ್ತವೆ, ಮಗುವಿನ ನಿಯೋಜನೆ ಮತ್ತು ಬೆಂಬಲಕ್ಕಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ ಮತ್ತು ಅವರನ್ನು ಕುಟುಂಬಗಳಿಗೆ ಪುನಃಕಳಿಸಲು ಅಥವಾ ಸುರಕ್ಷಿತ ಮನೆಗಳನ್ನು ಹುಡುಕಲು ಕೆಲಸ ಮಾಡುತ್ತವೆ. ಪ್ರಸ್ತುತ ಕರ್ನಾಟಕದಲ್ಲಿ 39 ಮಕ್ಕಳ ಕಲ್ಯಾಣ ಸಮಿತಿಗಳು ಮಂಜೂರಾಗಿದ್ದು 33 ಮಕ್ಕಳ ಕಲ್ಯಾಣ ಸಮಿತಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಗಂಡು ಮಕ್ಕಳಿಗಾಗಿ ಮತ್ತು ಹೆಣ್ಣು ಮಕ್ಕಳಿಗಾಗಿ ಹಾಗೂ ಆರು ವರ್ಷದ

***Please cite this article as:*** ಸುಮ, ವಿ. (2026). ಕರ್ನಾಟಕ ರಾಜ್ಯದ ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯವೈಖರಿ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 125–131

ಒಳಗಿನ ಮಕ್ಕಳಿಗಾಗಿ ಪ್ರತ್ಯೇಕವಾಗಿ ಸೇರಿದಂತೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ರಡಿಯಲ್ಲಿ ಕಲಂ 27ರಿಂದ 30ರವರೆಗೆ ಕಲ್ಯಾಣ ಸಮಿತಿಯ ರಚನೆ, ಅಧಿಕಾರ, ಕಾರ್ಯಗಳು ಪ್ರಕ್ರಿಯೆಗಳು ಮತ್ತು ಜವಾಬ್ದಾರಿಯ ಬಗ್ಗೆ ಅವಲೋಕಿಸಲಾಗಿದೆ.

**ಮಕ್ಕಳ ಕಲ್ಯಾಣ ಸಮಿತಿಯ ಸ್ವಭಾವಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ**

**ಶಾಸನಬದ್ಧ ಮತ್ತು ಸ್ವಾಯತ್ತತೆ:** ಬಾಲ ನ್ಯಾಯ ಕಾಯ್ದೆಯಡಿಯಲ್ಲಿ ರಾಜ್ಯ ಸರ್ಕಾರಗಳಿಂದ ಮಕ್ಕಳ ಕಲ್ಯಾಣ ಸಮಿತಿ ರಚಿಸಲ್ಪಟ್ಟಿದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆ.

**ಮಕ್ಕಳ ಕೇಂದ್ರಿತ**: ಇದರ ಪ್ರಾಥಮಿಕ ಗುರಿ ಯಾವಾಗಲೂ ಮಗುವಿನ ಹಿತಾಸಕ್ತಿ ಮತ್ತು ಯೋಗಕ್ಷೇಮವಾಗಿರುತ್ತದೆ.

**ಅರೆ–ನ್ಯಾಯಾಂಗ:** ನ್ಯಾಯಾಂಗ ಮ್ಯಾಜಿಸ್ಟ್ರೇಟ್‌ಗೆ ಸಮವಿರುವ ಅಧಿಕಾರಗಳೊಂದಿಗೆ ಮಕ್ಕಳ ಕಲ್ಯಾಣಕ್ಕಾಗಿ ನಿರ್ಧಾರಗಳು ಮತ್ತು ಆದೇಶಗಳನ್ನು ತೆಗೆದುಕೊಳ್ಳುವ ಪೀಠದಂತೆ ಕಾರ್ಯನಿರ್ವಹಿಸುತ್ತದೆ.

**ಸಮಗ್ರ ಪಾತ್ರ:** ಆರೈಕೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಯನ್ನು ನಿರ್ವಹಿಸುತ್ತದೆ ಮತ್ತು ಮೂಲಭೂತ ಅಗತ್ಯಗಳನ್ನು ಖಚಿತಪಡಿಸುತ್ತದೆ.

**ಜಿಲ್ಲಾ ಮಟ್ಟದ ಸಂಸ್ಥೆ:** ಸ್ಥಳೀಯವಾಗಿ ಪ್ರಕರಣಗಳನ್ನು ನಿರ್ವಹಿಸಲು ಪ್ರತಿ ಜಿಲ್ಲೆಯಲ್ಲಿ ಕಡ್ಡಾಯಗೊಳಿಸಲಾಗಿದೆ.

ಮಕ್ಕಳ ಕಲ್ಯಾಣ ಸಮಿತಿಯು ಭಾರತದಲ್ಲಿ 2015ರ ಬಾಲ ನ್ಯಾಯ ಕಾಯ್ದೆಯಡಿಯಲ್ಲಿ ರಚಿಸಲಾದ ಸ್ವಾಯತ್ತ ಸಂಸ್ಥೆಯಾಗಿದ್ದು, ಇದು ಪೋಷಕರಿಂದ ಕೈಬಿಡಲ್ಪಟ್ಟ, ಅನಾಥರಾದ, ಸ್ವಯಂ ಪ್ರೇರಣೆಯಿಂದ ನೀಡಲ್ಪಟ್ಟ ಅಥವಾ ಕಳೆದುಹೋದ ಮಕ್ಕಳ ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಗೆ ಸಂಬಂಧಿಸಿದ ವಿಷಯಗಳ ಕುರಿತು ಆರೈಕೆಯ ಅಗತ್ಯವಿರುವ ಮಕ್ಕಳ ದೂರುಗಳನ್ನು ನಿರ್ವಹಿಸಲು ಮತ್ತು ಪರಿಹರಿಸಲು ರಚಿಸಲಾಗಿದೆ.

**ಮಕ್ಕಳ ಕಲ್ಯಾಣ ಸಮಿತಿಗಳ ಪ್ರಾಮುಖ್ಯತೆಗಳನ್ನು ಈ ಕೆಳಕಂಡಂತೆ ಕಾಣಬಹುದು**

**ಕಾನೂನು ಪ್ರಾಧಿಕಾರ:** ಮ್ಯಾಜಿಸ್ಟ್ರೇಟ್ ಪೀಠವಾಗಿ ಕಾರ್ಯನಿರ್ವಹಿಸುತ್ತದೆ, ಮಗುವಿನ ಭವಿಷ್ಯದ ಬಗ್ಗೆ ನಿರ್ಧರಿಸುವ ಅಧಿಕಾರವನ್ನು ನೀಡುತ್ತದೆ ಹಾಗೂ ಮಕ್ಕಳಿಗೆ ನ್ಯಾಯಾಂಗ ಪ್ರಕ್ರಿಯೆಯನ್ನು ಖಚಿತಪಡಿಸುತ್ತದೆ.

**ಸಮಗ್ರ ಆರೈಕೆ:** ಮೂಲಭೂತ ಅವಶ್ಯಕತೆಗಳು, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿ ಮುಂತಾದ ಅಗತ್ಯಗಳನ್ನು ಪರಿಹರಿಸುತ್ತದೆ ಪೂರೈಸುತ್ತದೆ ಮತ್ತು ವೈಯಕ್ತಿಕ ಆರೈಕೆ ಯೋಜನೆಗಳನ್ನು ರಚಿಸುತ್ತದೆ.

**ಮಕ್ಕಳ ಕೇಂದ್ರಿತ ವಿಧಾನ:** ಮಕ್ಕಳಿಗೆ ಉತ್ತಮ ವಾತಾವರಣವನ್ನು ಸೃಷ್ಟಿಸುತ್ತದೆ, ಅವರ ಹಿತಾಸಕ್ತಿಗಳು ಮತ್ತು ಮಾನವ ಹಕ್ಕುಗಳ ಮೇಲೆ ಕೇಂದ್ರೀಕರಿಸುತ್ತದೆ.

**ರಕ್ಷಣೆ ಮತ್ತು ಸುರಕ್ಷತೆ:** ನಿಂದನೆ, ಶೋಷಣೆ ಮತ್ತು ಕಳ್ಳಸಾಗಣೆ ಪ್ರಕರಣಗಳನ್ನು ನಿರ್ವಹಿಸುತ್ತದೆ, ಅಪರಾಧಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತದೆ ಮತ್ತು ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸುತ್ತದೆ.

**ಪುನಃಸ್ಥಾಪನೆ ಮತ್ತು ದತ್ತು**: ಕಳೆದುಹೋದ ಅಥವಾ ಪರಿತ್ಯಕ್ತ ಮಕ್ಕಳನ್ನು ಅವರ ಕುಟುಂಬಗಳಿಗೆ ಪುನಃಸ್ಥಾಪಿಸಲು ಕೆಲಸ ಮಾಡುತ್ತದೆ ಮತ್ತು ಕಾನೂನುಬದ್ಧ ದತ್ತುಗಳನ್ನು ಸುಗಮಗೊಳಿಸುತ್ತದೆ.

**ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ**: ಸರಿಯಾದ ಜೀವನ ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳಲು ಮಕ್ಕಳ ಆರೈಕೆ ಸಂಸ್ಥೆಗಳನ್ನು ಪರಿಶೀಲಿಸುತ್ತದೆ ಮತ್ತು ಬಾಲ ಕಾರ್ಮಿಕ ಪದ್ಧತಿಗೆ ವ್ಯಕ್ತಿಗಳನ್ನು ಹೊಣೆಗಾರರನ್ನಾಗಿ ಮಾಡುತ್ತದೆ.

**ಪೂರ್ವಭಾವಿ ಹಸ್ತಕ್ಷೇಪ:** ಪ್ರಕರಣಗಳ ಸ್ವಯಂ ಪ್ರೇರಿತ ಅರಿವನ್ನು (ಸ್ವತಃ ಉಪಕ್ರಮದಲ್ಲಿ) ತೆಗೆದುಕೊಳ್ಳಬಹುದು.

ಮಕ್ಕಳ ಕಲ್ಯಾಣ ಸಮಿತಿಯ ಪ್ರಾಥಮಿಕ ಉದ್ದೇಶವೆಂದರೆ ಅಗತ್ಯವಿರುವ ಮಕ್ಕಳಿಗೆ ಆರೈಕೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿ ಒದಗಿಸುವುದು, ಬಾಲ ನ್ಯಾಯ ಕಾಯ್ದೆಯಡಿಯಲ್ಲಿ ಆರೈಕೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳಿಗೆ ಏಕೈಕ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುವುದು. ಮಗುವಿನ ಮೂಲಭೂತ ಅಗತ್ಯತೆಗಳು, ಸುರಕ್ಷತೆ ಮತ್ತು ಮಾನವ ಹಕ್ಕುಗಳ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವುದು, ಉತ್ತಮ ಫಲಿತಾಂಶಗಳಿಗಾಗಿ ವಿಚಾರಣೆಗಳನ್ನು ನಡೆಸುವುದು, ಕುಟುಂಬ ಪುನಃಸ್ಥಾಪನೆ ಅಥವಾ ಪರ್ಯಾಯ ಆರೈಕೆಯನ್ನು ಸುಗಮಗೊಳಿಸುವುದು ಮತ್ತು ಮಕ್ಕಳನ್ನು ನಿಂದನೆ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಿಸಲು ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸುವುದು ಪ್ರಮುಖ ಗುರಿಗಳಾಗಿವೆ.

**ಮಕ್ಕಳ ಕಲ್ಯಾಣ ಸಮಿತಿಯ ಉದ್ದೇಶಗಳು ಈ ಕೆಳಗಿನಂತಿವೆ**

**ಆರೈಕೆ ಮತ್ತು ರಕ್ಷಣೆ**: ಆರೈಕೆಯ ಅಗತ್ಯವಿರುವ ಮಕ್ಕಳ ತಕ್ಷಣದ ಸುರಕ್ಷತೆ, ಯೋಗಕ್ಷೇಮ ಮತ್ತು ಮೂಲಭೂತ ಅಗತ್ಯಗಳನ್ನು (ಆಹಾರ, ಆಶ್ರಯ, ಆರೋಗ್ಯ, ಶಿಕ್ಷಣ) ಖಚಿತಪಡಿಸಿಕೊಳ್ಳುವುದು.

**ಪುನರ್ವಸತಿ ಮತ್ತು ಅಭಿವೃದ್ಧಿ:** ಕುಟುಂಬ, ಪಾಲನೆ ಆರೈಕೆ, ದತ್ತು ಅಥವಾ ಸಾಂಸ್ಥಿಕ ಆರೈಕೆಗೆ ಪುನಃಸ್ಥಾಪನೆಗಾಗಿ ವೈಯಕ್ತಿಕ ಆರೈಕೆ ಯೋಜನೆಗಳನ್ನು ರಚಿಸಿ, ಸಮಗ್ರ ಬೆಳವಣಿಗೆಯ ಮೇಲೆ ಕೇಂದ್ರೀಕರಿಸುತ್ತದೆ.

**ವಿಚಾರಣೆ ಮತ್ತು ನಿರ್ಧಾರ ತೆಗೆದುಕೊಳ್ಳುವುದು:** ಮಗುವಿನ ಹಿತಾಸಕ್ತಿಯನ್ನು ನಿರ್ಧರಿಸಲು ವಿಚಾರಣೆಗಳನ್ನು ನಡೆಸುವುದು ಮತ್ತು ಆರೈಕೆ ಮತ್ತು ರಕ್ಷಣೆಗಾಗಿ ಪ್ರಕರಣಗಳನ್ನು ವಿಲೇವಾರಿ ಮಾಡುವುದು.

**ಕುಟುಂಬ ಸಂರಕ್ಷಣೆ ಮತ್ತು ಪುನಃಸ್ಥಾಪನೆ**: ಕಳೆದುಹೋದ ಅಥವಾ ಪರಿತ್ಯಕ್ತ ಮಕ್ಕಳನ್ನು ಸರಿಯಾದ ಪ್ರಕ್ರಿಯೆಯ ಮೂಲಕ ಅವರ ಕುಟುಂಬಗಳಿಗೆ ಹಿಂದಿರುಗಿಸಲು ಪ್ರಯತ್ನಗಳನ್ನು ಮಾಡುವುದು

**ಅಂತರ–ವಲಯ ಸಮನ್ವಯ:** ಮಕ್ಕಳ ರಕ್ಷಣೆಗೆ ಸಮಗ್ರ ಪ್ರತಿಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ಪೊಲೀಸ್, ಕಾರ್ಮಿಕ ಇಲಾಖೆಗಳು ಮತ್ತು ಇತರ ಸಂಸ್ಥೆಗಳೊಂದಿಗೆ ಕೆಲಸ ಮಾಡುವುದು.

**ತಡೆಗಟ್ಟುವಿಕೆ:** ಮಕ್ಕಳನ್ನು ದುರ್ಬಲತೆ, ಅಪಾಯ ಮತ್ತು ನಿಂದನೆಯಿಂದ ರಕ್ಷಿಸಲು ಕ್ರಮಗಳನ್ನು ಉತ್ತೇಜಿಸುವುದು ಮತ್ತು ಸಾರ್ವಜನಿಕ ಜಾಗೃತಿ ಮೂಡಿಸುವುದು.

**ಕಾನೂನು ಪ್ರಾಧಿಕಾರ:** ಮಕ್ಕಳ ಕಲ್ಯಾಣಕ್ಕಾಗಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಮ್ಯಾಜಿಸ್ಟ್ರೇಟ್‌ಗೆ ಹೋಲುವ ಅಧಿಕಾರ ಹೊಂದಿರುವ ಕಾನೂನು ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ.

ಮಕ್ಕಳ ಕಲ್ಯಾಣ ಸಮಿತಿಯು ದುರ್ಬಲ ಮಕ್ಕಳಿಗೆ ರಕ್ಷಕರಾಗಿ ಕಾರ್ಯನಿರ್ವಹಿಸುತ್ತವೆ, ಪ್ರತಿಯೊಂದು ನಿರ್ಧಾರವು ಸುರಕ್ಷಿತ ಮತ್ತು ಪೋಷಣೆಯ ವಾತಾವರಣಕ್ಕಾಗಿ ಮಗುವಿನ ಹಿತಾಸಕ್ತಿಗಳಿಗೆ ಆದ್ಯತೆ ನೀಡುತ್ತದೆ ಎಂದು ಖಚಿತಪಡಿಸುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಿ ಅಧಿನಿಯಮದಲ್ಲಿ ತಿಳಿಸಿರುವಂತೆ ಘೋಷಣೆ ಮತ್ತು ರಕ್ಷಣೆ ಕುರಿತು ಸಮಿತಿಗೆ ಆಯ್ಕೆಯಾದ ಸದಸ್ಯರುಗಳಿಗೆ ಅಧಿಸೂಚನೆ ಹೊರಡಿಸಿದ 2 ತಿಂಗಳೊಳಗೆ ಸಮಿತಿಯ ಪ್ರತಿಯೊಬ್ಬ ಸದಸ್ಯರಿಗೂ ಉತ್ತಮ ತರಬೇತಿಯನ್ನು ಕಡ್ಡಾಯಗೊಳಿಸಬೇಕು. ರಾಜ್ಯ ಸರ್ಕಾರವು ಒಬ್ಬ ಅಧ್ಯಕ್ಷರು ಮತ್ತು 4 ಜನ ಸದಸ್ಯರನ್ನು ಮಕ್ಕಳ ಕಲ್ಯಾಣ ಸಮಿತಿಗೆ ನೇಮಿಸುತ್ತಾರೆ. 4 ಜನ ಸದಸ್ಯರಲ್ಲಿ ಒಬ್ಬರು ಮಹಿಳೆಯಾಗಿದ್ದು ಮತ್ತು ಇನ್ನೊಬ್ಬರು ಮಕ್ಕಳ ಕುರಿತು ನುರಿತ ವ್ಯಕ್ತಿಯಾಗಿರುವವರನ್ನು ನೇಮಿಸುತ್ತಾರೆ. ಹಾಗೆಯೇ ಈ ಸಮಿತಿಯು

ಉತ್ತಮವಾಗಿ ಕಾರ್ಯ ನಿರ್ವಹಿಸಲು ಕಾರ್ಯದರ್ಶಿ ಮತ್ತು ಇತರೆ ಸಿಬ್ಬಂದಿಗಳನ್ನು ಜಿಲ್ಲೆಯ ಮಕ್ಕಳ ರಕ್ಷಣಾ ಘಟಕವು ಒದಗಿಸಬೇಕು ಅಥವಾ ಮಾನವ ಆರೋಗ್ಯ ಅಥವಾ ಶಿಕ್ಷಣ ಅಥವಾ ಮಾನವ ಬೆಳವಣಿಗೆ ಅಥವಾ ವಿಶೇಷ ಚೇತನ ಮಕ್ಕಳಿಗಾಗಿ ವಿಶೇಷ ಶಿಕ್ಷಣದ ಪದವಿಯನ್ನು ಹೊಂದಿದ್ದರೆ ಕನಿಷ್ಟಪಕ್ಷ 7 ವರ್ಷಗಳವರೆಗೆ ಮಕ್ಕಳಿಗೆ ಸಂಬಂಧಿಸಿದಂತೆ ಆರೋಗ್ಯ ಶಿಕ್ಷಣ ಅಥವಾ ಕ್ಷೇಮಾಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ ಅಥವಾ ಮಕ್ಕಳ ಮನೋವಿಜ್ಞಾನ ಅಥವಾ ಮನೋವೈದ್ಯಕೀಯ ವಿಜ್ಞಾನ ಅಥವಾ ಕಾನೂನು ಅಥವಾ ಸಮಾಜಕಾರ್ಯ ಅಥವಾ ಸಮಾಜ ವಿಜ್ಞಾನ ಅಥವಾ ಮಾನವ ಆರೋಗ್ಯ ಅಥವಾ ವಿಶೇಷ ಚೇತನ ಮಕ್ಕಳಿಗಾಗಿ ವಿಶೇಷ ಶಿಕ್ಷಣದಲ್ಲಿ ಪದವಿ ಪಡೆದಿದ್ದು ವೃತ್ತಿನಿರತನಾಗಿದ್ದರೆ ಅಂತಹ ವ್ಯಕ್ತಿಯನ್ನು ಸದಸ್ಯನಾಗಿ ನೇಮಕ ಮಾಡುವಂತಿಲ್ಲ. ಯಾವುದೇ ವ್ಯಕ್ತಿಯನ್ನು 3 ವರ್ಷಕ್ಕಿಂತ ಹೆಚ್ಚು ಕಾಲ ಸಮಿತಿಯ ಸದಸ್ಯನಾಗಿ ನೇಮಿಸುವಂತಿಲ್ಲ.

**ಕಲಂ 27(4–ಎ) ಪ್ರಕಾರ ಈ ಕೆಳಗಿನ ವ್ಯಕ್ತಿಗಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಅನರ್ಹನಾಗಿರುತ್ತಾನೆ.**

1. ಮಾನವ ಹಕ್ಕು ಮತ್ತು ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿ ದಾಖಲಾಗಿರುವ ವ್ಯಕ್ತಿ.
2. ಅಪರಾಧಿ ಎಂದು ನಿರ್ಧಾರವಾಗಿರುವ ವ್ಯಕ್ತಿ.
3. ಕೇಂದ್ರ ರಾಜ್ಯ ಸರ್ಕಾರಗಳು ಮಾಲೀಕತ್ವ ಅಥವಾ ನಿಗಮದ ಸೇವೆಯಿಂದ ವಜಾ ಮಾಡಲಾದ ವ್ಯಕ್ತಿ.
4. ಮಕ್ಕಳನ್ನು ಅನೈತಿಕ ಚಟುವಟಿಕೆಗಳಿಗೆ ದುರುಪಯೋಗ ಪಡಿಸಿಕೊಂಡಿರುವ ವ್ಯಕ್ತಿ.
5. ಬಾಲ ಕಾರ್ಮಿಕ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿ.
6. ಒಂದು ಜಿಲ್ಲೆಯ ಮಕ್ಕಳ ಪಾಲನೆ ಸಂಸ್ಥೆಯ ನಿರ್ವಹಣಾ ಭಾಗವಾಗಿರುವ ವ್ಯಕ್ತಿ.

**ಸಮಿತಿಯ ಸದಸ್ಯರನ್ನು ಈ ಕೆಳಗೆ ತಿಳಿಸಿರುವ ಅಂಶಗಳನ್ನು ತನಿಖೆ ಮಾಡಿ ಸದಸ್ಯತ್ವವನ್ನು ರದ್ದು ಪಡಿಸಬಹುದು.**

1. ಅಧಿನಿಯಮ ನೀಡಿರುವ ಅಧಿಕಾರಗಳನ್ನು ದುರುಪಯೋಗ ಪಡಿಸಿರುವುದು ಕಂಡುಬಂದಲ್ಲಿ
2. ಅನೈತಿಕ ವ್ಯವಹಾರದಲ್ಲಿ ತೊಡಗಿದ್ದ ಅವರಿಗೆ ನ್ಯಾಯಾಲಯ ಶಿಕ್ಷೆ ನೀಡಿದಾಗ;
3. ಸದಸ್ಯರು ಸೂಕ್ತ ಕಾರಣ ನೀಡದೆ ಸತತವಾಗಿ 3 ತಿಂಗಳುಗಳ ಕಾಲ ಸಮಿತಿಗೆ ಗೈರು ಹಾಜರಾದಲ್ಲಿ
4. ವರ್ಷದಲ್ಲಿ ನಡೆಯುವ ಒಟ್ಟು ಸಭೆಗಳ 3/4 ಭಾಗದಷ್ಟು ಕನಿಷ್ಟ ಸಭೆಗಳಿಗೆ ಗೈರಾದಲ್ಲಿ

ಸಮಿತಿಯ ಪ್ರಕಾರ್ಯದ ತ್ರೈಮಾಸಿಕ ವರದಿಯನ್ನು ಪುನರ್ ಪರಿಶೀಲನೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಮಾಡುವವರು ಈ ಸಮಿತಿಯು ನ್ಯಾಯಾಧೀಶರ ಪೀಠದಂತೆ ಕಾರ್ಯನಿರ್ವಹಿಸಬೇಕಿದ್ದು ಅಪರಾಧ ಪ್ರಕ್ರಿಯಾ ಸಂಹಿತೆ 1973ರಲ್ಲಿ ನಿಗದಿ ಪಡಿಸಿರುವಂತೆ ಅಧಿಕಾರಗಳನ್ನು ಹೊಂದಿದ್ದ ಮಹಾನಗರ ನ್ಯಾಯಾಧೀಶರು ಅಥವಾ ಆಯಾ ಸಂದರ್ಭಕ್ಕೆ ತಕ್ಕಂತೆ ಮೊದಲ ದರ್ಜೆಯ ನ್ಯಾಯಾಧೀಶರಂತೆ ಕಾರ್ಯ ನಿರ್ವಹಿಸಬೇಕು. ಜಿಲ್ಲಾ ಮ್ಯಾಜಿಸ್ಟ್ರೇಟರು ಸಮಿತಿಯ ಪ್ರಕಾರ್ಯದ ಪೈಕಿಯಿಂದ ಉದ್ಭವಿಸುವ ಯಾವುದೇ ಕುಂದುಕೊರತೆಯನ್ನು ಸ್ವೀಕರಿಸುವುದಕ್ಕೆ ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರವಾಗಿರುತ್ತದೆ ಮತ್ತು ಬಾದಿತ ಮಕ್ಕಳು ಅಥವಾ ಮಕ್ಕಳೊಂದಿಗೆ ಸಂಪರ್ಕ ಹೊಂದಿರುವ ಸಂದರ್ಭಾನುಸಾರ ಸಮಿತಿಯ ಕ್ರಮದ ಸಂಜ್ಞೆಯನ್ನು ತೆಗೆದುಕೊಳ್ಳತಕ್ಕ ಜಿಲ್ಲಾ ಮ್ಯಾಜಿಸ್ಟ್ರೇಟನ ಮುಂದೆ ದೂರನ್ನು ದಾಖಲು ಮಾಡಬಹುದು. ಮತ್ತು ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಸಮುಚಿತ ಆದೇಶಗಳನ್ನು ಮಾಡಬಹುದು.

**ಕಲಂ 28 ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಪ್ರಕ್ರಿಯೆಗಳು ಈ ಕೆಳಗಿನಂತಿವೆ.**

1. ಸಮಿತಿಯು ತಿಂಗಳಿಗೆ ಕನಿಷ್ಟ 20 ದಿನಗಳ ಕಾಲ ಸಭೆಗಳನ್ನು ನಡೆಸಿ, ಅಲ್ಲಿ ಸೂಚಿಸಲಾಗುವ ರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸಬೇಕು.
2. ಮಕ್ಕಳ ಪೋಷಣಾ ಗೃಹಗಳ ಕಾರ್ಯ ಚಟುವಟಿಕೆಗಳು ಮತ್ತು ಮಕ್ಕಳ ಸುರಕ್ಷತೆ ಕುರಿತು ತನಿಖೆ ನಡೆಸಲು ಅಂತಹ ಗೃಹಗಳಿಗೆ ಭೇಟಿ ನೀಡುವುದನ್ನೂ ಸಹ ಸಮಿತಿಯ ಸಭೆ ಎಂದು ಪರಿಗಣಿಸಬೇಕು.
3. ಸಮಿತಿಯು ಸಭೆ ಸೇರದ ಸಂದರ್ಭದಲ್ಲಿ, ಪೋಷಣೆ ಮತ್ತು ರಕ್ಷಣೆಯ ಆವಶ್ಯಕತೆ ಇರುವ ಮಕ್ಕಳನ್ನು ಸಮಿತಿಯ ಒಬ್ಬ ಸದಸ್ಯರ ಮುಂದೆ ಹಾಜರುಪಡಿಸಿ ಅಂತಹ ಮಕ್ಕಳನ್ನು ರಕ್ಷಿತ ಗೃಹಗಳಲ್ಲಿ ಇರಿಸಬಹುದು.
4. ಮಕ್ಕಳಿಗೆ ಸಂಬಂಧಿಸಿದ ಯಾವುದೇ ತಾತ್ಕಾಲಿಕ ಅಥವಾ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುವಾಗ ಸದಸ್ಯರ ನಡುವೆ ಭಿನ್ನಾಭಿಪ್ರಾಯ ಬಂದಲ್ಲಿ, ಬಹುಮತಕ್ಕೆ ಪ್ರಾಮುಖ್ಯತೆ ಬರುತ್ತದೆ, ಆದರೆ, ಬಹುಮತದ ಸಾಧ್ಯತೆ ಇಲ್ಲದ ಪಕ್ಷದಲ್ಲಿ ಸಮಿತಿಯ ಅಧ್ಯಕ್ಷರ ತೀರ್ಮಾನವೇ ಅಂತಿಮವಾಗುತ್ತದೆ.
5. ಈ ಮೇಲಿನ ಉಪಕಲಂ(1)ಪ್ರಕರಣವನ್ನು ಕುರಿತು ನಡೆದಿರುವ ಚರ್ಚೆ ವಿಚಾರಣೆ ಸಮಯದಲ್ಲಿ ಯಾವುದೇ ಸದಸ್ಯರು ಗೈರು ಆಗಿದ್ದ ಕಾರಣವೊಂದರಿಂದಲೇ ಯಾವುದೇ ನಿರ್ಧಾರವನ್ನು ಅಸಿಂಧು ಎಂದು ಪರಿಗಣಿಸಲಾಗದು ಅದರೆ ಪ್ರಕರಣದ ಅಂತಿಮ ವಿಲೇವಾರಿ ಸಮಯದಲ್ಲಿ ಕನಿಷ್ಟ ಮೂರು ಸದಸ್ಯರು ಹಾಜರಿರಬೇಕು.

**ಕಲಂ 29ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಅಧಿಕಾರಗಳು ಈ ಕೆಳಕಂಡಂತಿವೆ.**

1. ಯಾವ ಮಕ್ಕಳಿಗೆ ಪೋಷಣೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಯ ಅವಶ್ಯಕತೆ ಇದೆಯೋ ಮತ್ತು ಮಕ್ಕಳ ಮೂಲ ಅವಶ್ಯಕತೆಗಳನ್ನು ಪೂರೈಸಿ ಅವರ ಮಾನವ ಹಕ್ಕುಗಳನ್ನು ರಕ್ಷಿಸಲು ಮಕ್ಕಳ ಕಲ್ಯಾಣ ಸಮಿತಿ ಅಂತಿಮ ಅಧಿಕಾರ ಹೊಂದಿದೆ.
2. ಯಾವುದಾದರೂ ಪ್ರದೇಶಕ್ಕೆ (ಜಿಲ್ಲೆಗೆ) ಮಕ್ಕಳ ಕಲ್ಯಾಣ ಸಮಿತಿಯನ್ನು ನೇಮಿಸಲಾಗಿರುತ್ತದೋ, ಅಂತಹ ಸಮಿತಿಗೆ, ಈ ಸಮಯದಲ್ಲಿ ಚಾಲ್ತಿಯಲ್ಲಿರುವ ಇನ್ನಾವುದೇ ಕಾಯಿದೆಯಲ್ಲಿ ಎಂತಹದೇ ವಿಚಾರವಿದ್ದರೂ, ಈ ಕಾಯಿದೆಯಲ್ಲಿ ಆ ಉಲ್ಲೇಖವಿಲ್ಲದಿದ್ದ ಪಕ್ಷದಲ್ಲಿ, ಈ ಕಾಯಿದೆಯಲ್ಲಿ, ಮಕ್ಕಳ ಪೋಷಣೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಈ ಕಾಯಿದೆ ಉಲ್ಲೇಖಿಸುವ ಎಲ್ಲ ಪ್ರಕ್ರಿಯೆಗಳನ್ನು ನಡೆಸಲು ವಿಶೇಷ ಅಧಿಕಾರವಿದೆ.

**ಕಲಂ 30ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಕಾರ್ಯಕಲಾಪ ಮತ್ತು ಜವಾಬ್ದಾರಿಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ.**

1. ತನ್ನ ಮುಂದೆ ಹಾಜರುಪಡಿಸಿದ ಮಕ್ಕಳನ್ನು ಸ್ವೀಕರಿಸಿ ಅವರ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳುವುದು.
2. ಮಕ್ಕಳ ಕಲ್ಯಾಣ, ರಕ್ಷಣೆಗೆ ಪರಿಣಾಮ ಬೀರುವ ಸಂಬಂಧಿತ ಎಲ್ಲ ವಿಷಯಗಳ ಕುರಿತು ಈ ಕಾಯ್ದೆಯಡಿ ತನಿಖೆಯನ್ನು ನಡೆಸುವುದು.
3. ಪರಿವಿಕ್ಷಣಾಧಿಕಾರಿಗಳು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಸಾಮಾಜಿಕ ಕಾರ್ಯಕರ್ತರಿಗೆ ಮಕ್ಕಳ ಕಲ್ಯಾಣ ಸಮಿತಿಯು ಸಾಮಾಜಿಕ ತನಿಖೆಯನ್ನು ನಡೆಸಿ ಅದರ

ವರದಿಯನ್ನು ಸಮಿತಿಯ ಮುಂದೆ ಮಂಡಿಸಬೇಕೆಂದು ನಿರ್ದೇಶಿಸುವುದು.

4. ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳನ್ನು ನೋಡಿಕೊಳ್ಳಲು ಅರ್ಹ ವ್ಯಕ್ತಿಯೆಂದು ಘೋಷಿಸಲು ತನಿಖೆಯನ್ನು ನಡೆಸುವುದು.
5. ಮಗುವನ್ನು ಫಾಸ್ಟರ್ ಕೇರ್‌ನಲ್ಲಿಡಲು ನಿರ್ದೇಶನ ನೀಡಬಹುದು.
6. ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳ ವ್ಯಕ್ತಿಗತ ಪೋಷಣಾ ಯೋಜನೆಯ ಆಧಾರದ ಮೇಲೆ ಅವರ ಪೋಷಣೆ, ರಕ್ಷಣೆ, ಸೂಕ್ತ ಪುನರ್ವಸತಿ ಅಥವಾ ಪುನಃ ಸ್ಥಾಪನೆಗೊಳಿಸಲು ಹೆತ್ತವರಿಗೆ ಅಥವಾ ಪೋಷಕರಿಗೆ ಸೂಚಿಸುವುದು.
7. ಸಾಂಸ್ಥಿಕ ನೆರವಿನ ಅವಶ್ಯಕತೆಯಿರುವ ಮಗುವಿಗೆ ಅದರ ವಯಸ್ಸು, ಲಿಂಗ, ವಿಕಲಾಂಗತೆ ಮತ್ತು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಇಂತಹ ಮಗುವನ್ನು ಸಾಂಸ್ಥಿಕರಣಗೊಳಿಸಲು ಸೌಲಭ್ಯಗಳನ್ನು ಹೊಂದಿರುವ ನೋಂದಾಯಿತ ಸಂಸ್ಥೆಗಳನ್ನು ಆರಿಸುವುದು.
8. ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆಯಿರುವ ಮಕ್ಕಳ ನಿವಾಸ ಸೌಲಭ್ಯಗಳಿಗೆ ಕನಿಷ್ಠ ತಿಂಗಳಿಗೆ ಎರಡು ಬಾರಿ ತನಿಖಾ ಭೇಟಿಯನ್ನು ನೀಡುವುದು ಮತ್ತು ಅಲ್ಲಿನ ಸೇವೆಗಳ ಗುಣಮಟ್ಟದ ಸುಧಾರಣೆಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ರಾಜ್ಯ ಸರ್ಕಾರಗಳಿಗೆ ಕ್ರಮ ಕೈಗೊಳ್ಳಲು ಸಲಹೆಗಳನ್ನು ನೀಡುವುದು.
9. ಕುರಿತು ಪೋಷಕರಿಂದ ಮಗುವನ್ನು ವಶಕ್ಕೆ ಅವರಿಗೆ ಪಡೆದ ಕುರಿತು ಪ್ರಮಾಣೀಕರಿಸುವುದು ಮತ್ತು ಅವರಿಗೆ ನಿರ್ಧಾರಗಳನ್ನು ಮರುಚಿಂತಿಸಲು ಸಮಯ ಅವರ ಮತ್ತು ಮಗುವು ಕುಟುಂಬದ ಜೊತೆಗಿರುವಂತೆ ಮಾಡುವ ಎಲ್ಲಾ ಪ್ರಯತ್ನಗಳನ್ನು ಖಾತ್ರಿಪಡಿಸವುದು.
10. ತ್ಯಜಿಸಲ್ಪಟ್ಟ ಅಥವಾ ಕಳೆದುಹೋದ ಮಗುವನ್ನು ಅವರ ಕುಟುಂಬಗಳಿಗೆ ಸೇರಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುವುದನ್ನು ನಿರ್ದಿಷ್ಟ ಸೂಚಿತ ಪ್ರಕ್ರಿಯೆಗಳನ್ನು ಅನುಸರಿಸುವುದರ ಮೂಲಕ ಖಾತ್ರಿಗೊಳಿಸುವುದು.
11. ಸೂಕ್ತವಾದ ತನಿಖೆಯ ನಂತರ ಅನಾಥ, ಪರಿತ್ಯಜಿಸಿದ ಅಥವಾ ವಶಕ್ಕೆ ಪಡೆದ ಮಗುವನ್ನು ದತ್ತು ನೀಡಲು ಕಾನೂನು ಮುಕ್ತ ಎಂದು ಘೋಷಿಸುವುದು.
12. ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗದ ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳು ಇರುವ ಸ್ಥಳಗಳಿಗೆ ಧಾವಿಸಿ/ತೆರಳಿ ಸ್ವಪ್ರೇರಿತ ಪ್ರಕರಣಗಳನ್ನು ದಾಖಲಿಸಿಕೊಳ್ಳಬೇಕು, ಆದರೆ ಇಂತಹ ನಿರ್ಧಾರ ಕೈಗೊಳ್ಳುವಾಗ ಕನಿಷ್ಠ ಮೂರು ಸದಸ್ಯರ ಒಪ್ಪಿಗೆಯಿರಬೇಕು.
13. ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳೆಂದು ಪ್ರಕರಣಕ್ಕೆ ತಕ್ಕ ಹಾಗೆ ಮಕ್ಕಳ ವಿಶೇಷ ಪೋಲಿಸ್ ಘಟಕ ಅಥವಾ ಸ್ಥಳೀಯ ಪೋಲಿಸರು ವರದಿ ನೀಡಿದ ಲೈಂಗಿಕವಾಗಿ ದುರುಪಯೋಗಗೊಂಡ ಮಕ್ಕಳನ್ನು ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳ ರಕ್ಷಣೆ ಕಾಯ್ದೆ 2012ರ ಅಡಿಯಲ್ಲಿ ಪುನರ್ವಸತಿಗೊಳಿಸಲು ಕ್ರಮಗಳನ್ನು ಕೈಗೊಳ್ಳುವುದು.
14. ಕಲಂ17ರಉಪಕಲಂ(2)ರ ಅಡಿಯಲ್ಲಿ ಮಂಡಳಿಯು ಸೂಚಿಸಿದ ಪ್ರಕರಣಗಳನ್ನು ನಿರ್ವಹಿಸುವುದು.
15. ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ರಾಜ್ಯ ಸರ್ಕಾರದ ನೆರವಿನಿಂದ ಮಕ್ಕಳ ರಕ್ಷಣೆ ಮತ್ತು ಪೋಷಣೆಯ ಅವಶ್ಯಕತೆಗೆ ಸಂಬಂಧಿಸಿದಂತೆ

ಪೋಲಿಸ್, ಕಾರ್ಮಿಕ ಇಲಾಖೆ ಮತ್ತು ಇತರೆ ಸಂಸ್ಥೆಗಳೊಡನೆ ನಿರಂತರ ಸಂಯೋಜನೆ ಸಂಪರ್ಕವನ್ನು ಇಟ್ಟುಕೊಳ್ಳುವುದು.

16. ಯಾವುದೇ ಮಕ್ಕಳ ಪೋಷಣಾ ಸಂಸ್ಥೆಯಲ್ಲಿ ಮಕ್ಕಳ ದುರುಪಯೋಗದ ದೂರು ಬಂದಲ್ಲಿ, ಸಮಿತಿಯು ತನಿಖೆಯನ್ನು ನಡೆಸಬೇಕು ಮತ್ತು ಪ್ರಕರಣಕ್ಕೆ ತಕ್ಕ ಹಾಗೆ ಪೋಲಿಸರಿಗೆ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಅಥವಾ ಕಾರ್ಮಿಕ ಇಲಾಖೆಗೆ ಅಥವಾ ಚೈಲ್ಡ್ ಲೈನ್ ಸೇವೆಗೆ ನಿರ್ದೇಶನವನ್ನು ನೀಡಬೇಕು.
17. ಮಗುವಿಗೆ ಸೂಕ್ತ ಕಾನೂನು ಸೇವೆಯನ್ನು ಒದಗಿಸುವುದು.
18. ನಿರ್ಧಿಷ್ಟಪಡಿಸಿದ ಇತರೆ ಯಾವುದೇ ಕಾರ್ಯಗಳು ಮತ್ತು ಜವಾಬ್ದಾರಿಗಳು.

**ಉಪಸಂಹಾರ**

ಕರ್ನಾಟಕದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮಕ್ಕಳ ಪೋಷಣೆ ಮತ್ತು ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮುಖ್ಯವಾಗಿ ನಿರ್ಗತಿಕ, ದುರ್ಬಲ ವರ್ಗ ಮತ್ತು ಕಾನೂನಿನ ಸಮಸ್ಯೆ ಎದುರಿಸುತ್ತಿರುವ ಮಕ್ಕಳ ಕಲ್ಯಾಣ ಮಾಡುವ ಉದ್ದೇಶದಿಂದ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ರಲ್ಲಿ ಮಕ್ಕಳನ್ನು ಪಾಲನೆ ಮತ್ತು ರಕ್ಷಣೆ ಕುರಿತು ಹಲವಾರು ಕಲಂಗಳನ್ನು ರಚಿಸಿ ವಿಸ್ತರಿಸಲಾಗಿದೆ ಅದರಲ್ಲೂ ಮಕ್ಕಳ ಕಲ್ಯಾಣ ಸಮಿತಿಯು ಕೂಡ ಒಂದಾಗಿದೆ ಇಲ್ಲಿ ಈ ಸಮಿತಿಯ ರಚನೆ ಮತ್ತು ಅಧಿಕಾರ ಕಾರ್ಯಕ್ರಮಗಳು ಒಟ್ಟಿನಲ್ಲಿ ಮಕ್ಕಳ ಪಾಲನೆ ಪೋಷಣೆ ಮತ್ತು ರಕ್ಷಣೆಯಲ್ಲಿ ಇರುವ ಮಕ್ಕಳ ಪ್ರಕರಣಗಳು ವಿಚಾರಣೆ ಆಗುತ್ತಿದ್ದ ಸಮಯದಲ್ಲಿ ಮಕ್ಕಳನ್ನು ಪೋಷಣೆ ರಕ್ಷಣೆ ಚಿಕಿತ್ಸೆ ಶಿಕ್ಷಣ ತರಬೇತಿ ಅಭಿವೃದ್ಧಿ ಮತ್ತು ಪುನರ್ವಸತಿಗಾಗಿ ಮಕ್ಕಳ ಕಲ್ಯಾಣ ಸಮಿತಿಯು ಶ್ರಮಿಸುತ್ತಿದೆ ಮತ್ತು ಜವಾಬ್ದಾರಿಗಳನ್ನು ಚರ್ಚಿಸಲಾಗಿದೆ

**ಪರಾಮರ್ಶನ ಗ್ರಂಥಗಳು**


- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015– ಕೆಎಲ್ಆರ್ ಪಬ್ಲಿಕೇಷನ್.
- ದೇಸಾಯಿ, ಎಸ್.ಸಿ. ಮಹಿಳಾ ಮತ್ತು ಮಕ್ಕಳ ಕಾನೂನು
- ರಾಜಶೇಖರ್, ಎಸ್. *ಪ್ರಚಲಿತ ಸಾಮಾಜಿಕ ಸಮಸ್ಯೆಗಳು*